ಅಚ್ಚಳಿಯದ ಹೆಜ್ಜೆ ಗುರುತು ಮೂಡಿಸಿ ಹೋದವರು.

## ಬಹುಶ್ರುತ ವಿದ್ವಾಂಸ

ಪಂ. ಶಿವಾನಂದ ಪಾಟೀಲ್ ಹಿಂದೂಸ್ತಾನಿ ಸಂಗೀತದ ಬಹುಶ್ರುತ ವಿದ್ವಾಂಸರಾಗಿದ್ದವರು. 1960ರಲ್ಲಿ ಬೆಳಗಾವಿಯ ಅಂಕಲಿಯಲ್ಲಿ ಜನನ. ತಂದೆ ಶಂಕರಗೌಡ ಪಾಟೀಲ ಹಾಗೂ ತಾಯಿ ರಂಗಭೂಮಿ ಕಲಾವಿದೆ ಹೀರಾಬಾಯಿ. ತಂದೆಯವರೂ ರಂಗಭೂಮಿ ಕಲಾವಿದರೇ ಆಗಿದ್ದರು, ಅಲ್ಲದೆ ಏಣಗಿ ಬಾಳಪ್ಪ ಅವರೊಂದಿಗೆ ರಂಗತಂಡಗಳಲ್ಲಿ ಸಕ್ರಿಯ ಕಲಾವಿದ. ಶಿವಾನಂದ ಪಾಟೀಲರಿಗೆ ಸಾಹಿತ್ಯ, ರಂಗಭೂಮಿ, ಸಂಗೀತ ಮೂರರಲ್ಲೂ ಅಪಾರ ಆಸಕ್ತಿ. ಇವರ ಕಂಠವೂ ಬಹಳ ಸೊಗಸಾಗಿತ್ತು.

ಮನೆತನವೇ ಸಂಗೀತ. ಅಲ್ಲದೆ ತಂದೆತಾಯಿಯರೇ ಆರಂಭದ ಸಂಗೀತ ಗುರುಗಳು. ಮುಂದೆ ಪಂ. ಅಪ್ಪಾಸಾಹೇಬ್ ಪಣಗೇರಿಕರ್, ಪಂ. ಬಸವರಾಜ ರಾಜಗುರು, ಪಂ. ಕಾನೆ ಬುವಾ, ಪಂ. ಜಿತೇಂದ್ರ ಅಭಿಷೇಕಿ, ಪಂ. ಯಶವಂತ ಬುವಾ ಜೋಶಿ ಹಾಗೂ ಗಂಗೂಬಾಯಿ ಹಾನಗಲ್ ಅವರ ಬಳಿ ಹೆಚ್ಚಿನ ಮಾರ್ಗದರ್ಶನ ಪಡೆದರು. ಹೀಗಾಗಿ ಪಾಟೀಲ ಅವರಿಗೆ ಗ್ವಾಲಿಯರ್, ಆಗ್ರಾ ಹಾಗೂ ಕಿರಾಣಾ ಘರಾಣೆಗಳಲ್ಲಿ ಪರಿಣತಿ ಸಾಧಿಸಿ ಉಳಿದ ಸಂಗೀತ ಕಲಾವಿದರಿಂದ ವಿಭಿನ್ನವಾದ ಶೈಲಿ ರೂಢಿಸಿಕೊಂಡಿದ್ದರು.

ಕನ್ನಡ ಮತ್ತು ಮರಾಠಿ ಸಂಗೀತದ ವಿವಿಧ ಆಯಾಮಗಳ ಬಗ್ಗೆ ವಿಶೇಷ ಜ್ಞಾನ ಬೆಳೆಸಿಕೊಂಡಿದ್ದರು. ಶಾಸ್ತ್ರೀಯ ಸಂಗೀತದ ಜೊತೆಗೆ ಭಾವಗೀತೆ, ದಾಸವಾಣಿ, ಮರಾಠಿ ಅಭಂಗಗಳನ್ನೂ ಪರಿಪೂರ್ಣವಾಗಿ ಹಾಡುವ ಛಾತಿ ಹೊಂದಿದ್ದರು. ರಾಗ ಸಂಯೋಜನೆ ಬಗೆಗಿನ ತಾತ್ವಿಕ ಹಾಗೂ ತಂತ್ರಕಾರಿ ಅಂಶಗಳನ್ನೂ ಚೆನ್ನಾಗಿ ಕರಗತ ಮಾಡಿಕೊಂಡಿದ್ದರು. ಅಲ್ಲದೆ ಹಿರಿಯ ಸಂಗೀತಗಾರರಾದ ಪಂ. ವಸಂತ ಕನಕಾಪುರ, ಪಂ. ಶ್ರೀನಿವಾಸ ಕಾಳೆ, ಪಂ. ಯಶವಂತ್ ದೇವ್, ಪಂ. ಸುಧೀರ್ ಫಡ್ಕೆ, ಪಂ. ಹೃದಯಾನಾಥ್ ಮಂಗೇಶ್ಕರ್ ಮುಂತಾದವರ ಜೊತೆಗೆ ರಾಗ ಸಂಯೋಜನೆ, ಗಾಯನದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಮರಾಠಿ ಮತ್ತು ಕನ್ನಡದಲ್ಲಿ ಹಲವಾರು ಬಂದೀಶ್‌ಗಳನ್ನು ರಚಿಸಿ, ರಾಗ ಸಂಯೋಜಿಸಿದ್ದು, ತಮ್ಮ ರಚನೆಗಳನ್ನು 'ಶಿವರಂಗ್' ನಾಮದಲ್ಲಿ ಮಾಡುತ್ತಿದ್ದರು.

ಸಂಗೀತ ಕೇಳ್ಮೆಯಿಂದಲೂ ಬರುತ್ತದೆ ಎಂಬುದನ್ನು ಬಲವಾಗಿ ನಂಬಿದ್ದ ಇವರು ದಿಗ್ಗಜರ ಸಂಗೀತವನ್ನು ಸತತವಾಗಿ ಕೇಳುತ್ತಿದ್ದರು. ಇದರಿಂದ ಉತ್ತಮ ಗಾಯಕ, ಸಂಗೀತ ಸಂಯೋಜಕ, ನಿರ್ದೇಶಕರಾಗಿ ಬಹುಶ್ರುತ ವಿದ್ವಾಂಸರಾಗಿ ರೂಪುಗೊಂಡಿದ್ದರು. ಆಕಾಶವಾಣಿಯ 'ಎ' ಗ್ರೇಡ್ ಕಲಾವಿದರೂ ಆಗಿದ್ದರು.

'ಹಿಂದೂಸ್ತಾನಿ ಗಾಯನ ಮಾತ್ರವಲ್ಲ, ರಂಗಗೀತೆಗಳನ್ನು ಸಂಯೋಜಿಸಿ ಹಾಡುವುದರಲ್ಲಿ ಶಿವಾನಂದ ಪಾಟೀಲ ಅವರದು ಮುಂಚೂಣಿಯ ಹೆಸರು. ಮರಾಠಿ ಅಭಂಗ, ಕನ್ನಡ ಗೀತೆ, ಸುಗಮ ಸಂಗೀತ, ಭಜನ್, ದೇವರನಾಮ, ದಾಸರಪದಗಳನ್ನೂ ಬಹಳ ವಿಶಿಷ್ಟವಾಗಿ ಹಾಡುತ್ತಿದ್ದರು. ಹಲವಾರು ನಾಟಕಗಳಲ್ಲಿಯೂ ಪ್ರಧಾನ ಪಾತ್ರಗಳಲ್ಲಿ ಅಭಿನಯಿಸಿದ್ದರು. ಹಲವು ಅಪರೂಪದ ರಾಗಗಳನ್ನು ಹಾಡಿದ ಆಲ್ಬಂ ಅನ್ನೂ ಹೊರತಂದಿದ್ದು ಸಂಗೀತ ಕ್ಷೇತ್ರದಲ್ಲಿ ಅಚ್ಚಳಿಯದ ಛಾಪು ಮೂಡಿಸಿದ್ದ ವಿಶಿಷ್ಟ ಕಲಾವಿದರಿವರು' ಎಂದು ನೆನಪಿಸಿಕೊಳ್ಳುತ್ತಾರೆ ನಾಡಿನ ಹೆಸರಾಂತ ತಬಲಾ ವಾದಕ ಪಂ. ಉದಯರಾಜ ಕರ್ಪೂರ್.

'ಪಾಟೀಲರು ನಮ್ಮ ನಡುವಿನ ವಿಭಿನ್ನ ಹಾಗೂ ಅತ್ಯಂತ ಪ್ರತಿಭಾವಂತ ಗಾಯಕರಾಗಿದ್ದವರು. ಅವರ ಕಛೇರಿಗಳನ್ನು ಕೇಳುವುದೇ ಒಂದು ರೀತಿಯ ಪರಮಾನಂದ ಅನುಭವ. ಇಂಥ ಮಹಾನ್ ಗಾಯಕ ನೂರ್ಕಾಲ ಬಾಳಬೇಕಿತ್ತು. ಆದರೆ ವಿಧಿ ಅವರನ್ನು ಬೇಗನೇ ಕರೆದೊಯ್ದಿತು' ಎಂದು ಹೇಳುತ್ತಾರೆ ಪಂ. ಉದಯರಾಜ್.



ಲತಾ ಮಂಗೇಶ್ಕರ್ ಅವರಿಂದ ಪಂ. ದೀನಾನಾಥ್ ಮಂಗೇಶ್ಕರ್ ರಾಷ್ಟ್ರೀಯ ಪ್ರಶಸ್ತಿ ಪಡೆಯುತ್ತಿರುವುದು

## ಪ್ರಶಸ್ತಿ- ಪುರಸ್ಕಾರಗಳು

- ಕೃಷ್ಣಾ ಹಾನಗಲ್ ಸ್ಮರಣಾರ್ಥ ನೀಡುವ ರಾಷ್ಟ್ರೀಯ ಪ್ರಶಸ್ತಿ
- ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ
- ಮುಂಬಯಿಯ ಸುರ್‌ಸಿಂಗಾರ್ ನೀಡುವ ಸುರಮಣಿ ಪ್ರಶಸ್ತಿ
- ಪಂ. ದೀನಾನಾಥ್ ಮಂಗೇಶ್ಕರ್ ರಾಷ್ಟ್ರೀಯ ಪ್ರಶಸ್ತಿ
- ಅಖಿಲ ಭಾರತೀಯ ಮರಾಠಿ ನಾಟ್ಯ ಪರಿಷದ್ ಮಹಾರಾಷ್ಟ್ರ ನೀಡುವ 'ಪಂ. ರಾಮ್ ಮರಾಠೆ' ಪ್ರಶಸ್ತಿ
- ಸ್ವರ ರಾಜ್ ಛೋಟಾ ಗಂಧರ್ವ ಬಿರುದು
- ಪಂ. ಭಾತಖಂಡೆ ಪ್ರಶಸ್ತಿ (ಪಂ.ಭಾತಖಂಡೆ ಅವರು ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯದ ಸಂಸ್ಥಾಪಕರು)
- ನಾಟ್ಯ ದರ್ಪಣ ಪ್ರಶಸ್ತಿ
- ಸಂಗೀತ ಕಲಾರತ್ನ ಪುರಸ್ಕಾರ

'ಮರಾಠಿ ಅಭಂಗಗಳನ್ನು ಹಾಡುತ್ತಿದ್ದಾಗ ರೋಮಾಂಚನಗೊಂಡು ನೆರೆದವರೆಲ್ಲರೂ ತಲೆದೂಗುತ್ತಿದ್ದರು. ಲತಾ ಮಂಗೇಶ್ಕರ್ ಅವರೂ ಶಿವಾನಂದ ಪಾಟೀಲರ ಗಾಯನವನ್ನು ಬಹುವಾಗಿ ಮೆಚ್ಚಿದ್ದರು. ಅವರ ಗಾಯನಕ್ಕೆ, ಒಟ್ಟಾರೆ ಸಂಗೀತ ಬದುಕಿಗೆ ಪತ್ನಿ ಯೋಜನಾ ಪಾಟೀಲ್ ಸತತ ಬೆನ್ನೆಲುಬಾಗಿದ್ದರು' ಎಂದೂ ನೆನಪಿನ ಬುತ್ತಿಯನ್ನು ಬಿಚ್ಚುತ್ತಾರೆ ಪಂ. ಉದಯರಾಜ್.

## ದಿಗ್ಗಜರ ಸಂಗದಲ್ಲಿ...

ಪಂ. ಶಿವಾನಂದ ಅವರು ಗಾನಕೋಗಿಲೆ ಲತಾ ಮಂಗೇಶ್ಕರ್ ಜೊತೆ ಹಲವು ಸಂಗೀತ ಪ್ರಾಜೆಕ್ಟ್‌ಗಳಲ್ಲಿ ಕೆಲಸ ಮಾಡಿದ್ದರು. ಅಲ್ಲದೆ ದಿಗ್ಗಜರಾದ ಪಂ. ಹೃದಯನಾಥ್ ಮಂಗೇಶ್ಕರ್, ಪಂ. ಯಶ್ವಂತ್ ದೇವ್, ಅಶೋಕ್ ಪದಕಿ, ಭಾಸ್ಕರ್ ಚಂದಾವರ್ಕರ್, ಪಂ. ರಾಮ್‌ನಾರಾಯಣ್, ಪಂ. ಶಿವಕುಮಾರ್ ಶರ್ಮ, ಪಂ. ಹರಿಪ್ರಸಾದ್ ಚೌರಾಸಿಯ, ಡಾ. ಎನ್. ರಾಜಂ, ಉಸ್ತಾದ್ ಶಾಹಿದ್ ಪರ್ವೇಜ್, ಬೇಗಂ ಪರ್ವೀನ್ ಸುಲ್ತಾನ, ಉಸ್ತಾದ್ ದಿಲ್ಶಾದ್ ಖಾನ್ ಮುಂತಾದವರ ಜೊತೆಯಲ್ಲೂ ಸಂಗೀತಕ್ಕಾಗಿ ಗಣನೀಯ ಸೇವೆ ಸಲ್ಲಿಸಿದ್ದರು. ಹಲವು ಬಾಲಿವುಡ್ ಸಿನಿಮಾಗಳಿಗೂ ಹಿನ್ನಲೆ ಗಾಯನ ನೀಡಿದ್ದರು.

ಅತ್ಯಂತ ಸುಪ್ರಸಿದ್ಧವಾದ ಇವರ ಗಾಯನ ಯೂಟ್ಯೂಬ್‌ನಲ್ಲಿ ಆಲಿಸಲು ಈ ಕೊಂಡಿಗಳನ್ನು ಕ್ಲಿಕ್ಕಿಸಿ.

ರಾಗ ಲಲತ್: https://youtu.be/NvVFENr8k2A

ಮಾಲ್‌ಕೌಂಸ್ ರಾಗ ಬಂದೀಶ್, 'ಸೋ ಬಲ್ಮ ಮೊರೆ..' https://youtu.be/1StRifvadEo

'ಮಾರೊ ಬಿಹಾಗ್' ರಾಗದ ದ 'ಅತ್‌ಮನ್ ಛಾಯೆ...' ಖಯಾಲ್ ಗಾಯನ https://youtu.be/EdbIGOHfsxs